# 3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ

## ಎಸ್.ಸಿ. ಸಂಖ್ಯೆ 24/2025

**ಫಿರ್ಯಾದಿದಾರರು :** **ಕರ್ನಾಟಕ ರಾಜ್ಯದ ಪರವಾಗಿ,**
**ಪಿ.ಐ., ಕಲಘಟಗಿ ಪೊಲೀಸ್ ಠಾಣೆ.**

**ವಿರುದ್ಧ**

**ಆರೋಪಿ** 2. **ಬಸಪ್ಪ ಪಾಟೀಲ @ ಬಸವರಾಜ @**
**ಬಸನಗೌಡ ತಂದೆ ಮೈಲಾರಿ @ ಮೈಲಾರಪ್ಪ,**
**ವಃ 21 ವರ್ಷ, ವಾಸಃ ಕುರವಿನಕೊಪ್ಪ,**
**ತಾಃ ಕಲಘಟಗಿ.**

## ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 351 ರಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಶ್ನೆಃ 1) ನ್ಯಾಯಾಲಯದಲ್ಲಿ ವಿಚಾರಣೆ ಮಾಡಿದ ಸಾಕ್ಷಿಗಳ ಹೇಳಿಕೆಯನ್ನು ನೀವು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಅ.ಸಾ.5 ಡಾ. ಮಹೇಶ್ವರಿ ಬಗರಿ ತಮ್ಮ ಸಾಕ್ಷ್ಯದಲ್ಲಿ, ದಿಃ 31/12/2024 ರಂದು ಮೃತೆ ಅನುಸೂಯಾ ಮಂಜುನಾಥ ಪಾಟೀಲ ಅವರ ಮರಣೋತ್ತರ ಪರೀಕ್ಷೆ ನಡೆಸುವಂತೆ ಕಲಘಟಗಿ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಂದ ನನಗೆ ಒಂದು ವಿನಂತಿ ಪತ್ರ ಬಂದಿದ್ದು, ಪರೀಕ್ಷೆಯಲ್ಲಿ, ಸುಮಾರು 35 ವರ್ಷ ವಯಸ್ಸಿನ ಮೃತ ಮಹಿಳೆಯ ಶವದ ಮೇಲೆ ಬಾಹ್ಯ ಗಾಯಗಳು ಕಂಡಿದ್ದು, ಅವರಿಗೆ ಒಂದು ಅಂಡಾಕಾರದ ಚೂರಿ ಗಾಯ ಕಂಡುಬಂದಿದ್ದು, ಅದು ಎದೆಯ ಎಡಭಾಗದ ಕೆಳಭಾಗದಲ್ಲಿ ಎಡ ಭುಜದ ಕೆಳಗೆ 1.5 ಸೆಂ.ಮೀ ಉದ್ದ, 3 ಸೆಂ. ಮೀ. ಅಗಲ, ಸುಮಾರು 5 ಸೆಂ. ಮೀ. ಆಳದಲ್ಲಿ ಕಂಡುಬಂದಿದೆ, 2) ಸಣ್ಣ ಕರುಳಿನ ಹರ್ನಿಯೇಷನ್ ಎಡ ಇಲಿಯಾಕ್ ಪ್ರದೇಶದಲ್ಲಿ

ಅಂಡಾಕಾರದ ಗಾಯವು 1.5 ಸೆಂ.ಮೀ ಉದ್ದ, 3 ಸೆಂ. ಮೀ. ಅಗಲ ಮತ್ತು ಸುಮಾರು 5 ಸೆಂ. ಮೀ. ಆಳದಲ್ಲಿ ಕಂಡುಬಂದಿತು ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ3) ಅ.ಸಾ.5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪರೀಕ್ಷೆಯಲ್ಲಿ ತಲೆಬುರುಡೆ ಮತ್ತು ಬೆನ್ನುಹುರಿಯ ಕಾಲುವೆ ಇಂಟ್ಯಾಕ್ಟ ಹಾಗೂ ಮಸುಕಾಗಿತ್ತು, ಎದೆಯ ಪರೀಕ್ಷೆಯಲ್ಲಿ, ಎಡ ಸಬ್‌ಕ್ಲಾವಿಯನ್ ಅಪಧಮನಿ ಮತ್ತು ಎಡ ಸಬ್‌ಕ್ಲಾವಿಯನ್ ರಕ್ತನಾಳವನ್ನು ಸಂಪೂರ್ಣವಾಗಿ ಕತ್ತರಿಸಲಾಗಿದೆ, ಹೊಟ್ಟೆಯ ಪರೀಕ್ಷೆಯಲ್ಲಿ, ಸಣ್ಣ ಕರುಳು ಹಾಗೆ ಇತ್ತು, ಆದರೆ ಅರ್ಧ ಮೀಟರ್ ಅಂತರದ ಎರಡು ಬಿಂದುಗಳಲ್ಲಿ ಸಂಕುಚಿತಗೊಂಡಿತ್ತು (ಹರ್ನಿಯೇಟೆಡ್ ಭಾಗ) ಮತ್ತು ಬಣ್ಣದಲ್ಲಿ ಮಸುಕಾಗಿತ್ತು, ಜನನಾಂಗದ ಮೂತ್ರಾಂಗಗಳ ಪರೀಕ್ಷೆಯಲ್ಲಿ, ಅವುಗಳು ಹಾಗೆ ಇದ್ದವು, ಸ್ನಾಯುಗಳು, ಮೂಳೆಗಳು ಮತ್ತು ಕೀಲುಗಳನ್ನು ಪರೀಕ್ಷಿಸಿದಾಗ ಅವುಗಳು ಹಾಗೇ ಇದ್ದವು, ಅವರಿಗೆ ಒಂದು ಅಂಡಾಕಾರದ ಚೂರಿ ಗಾಯ ಕಂಡುಬಂದಿದ್ದು, ಅದು ಎದೆಯ ಎಡಭಾಗದ ಕೆಳಭಾಗದಲ್ಲಿ ಎಡ ಭುಜದ ಕೆಳಗೆ 1.5 ಸೆಂ.ಮೀ ಉದ್ದ, 3 ಸೆಂ. ಮೀ. ಅಗಲ, ಸುಮಾರು 5 ಸೆಂ. ಮೀ. ಆಳದಲ್ಲಿ ಕಂಡುಬಂದಿದೆ, 2) ಎಡ ಇಲಿಯಮ್ ಪ್ರದೇಶದ ಅಂಡಾಕಾರದ ಗಾಯದಲ್ಲಿ ಸಣ್ಣ ಕರುಳಿನ ಹರ್ನಿಯೇಶನ್ ಕಂಡುಬಂದಿದೆ, ಇದು 1.5 ಸೆಂ.ಮೀ ಉದ್ದ, 3 ಸೆಂ. ಮೀ. ಅಗಲ ಮತ್ತು ಸುಮಾರು 5 ಸೆಂ. ಮೀ. ಆಳವನ್ನು ಹೊಂದಿದೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ4) ಅ.ಸಾ.5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮರಣ ಹೊಂದಿದ ವ್ಯಕ್ತಿಯ ಗಾಯದ ಬಗ್ಗೆ ಹೆಚ್ಚಿನ ವಿವರಗಳ ವಿವರಣೆ, ಎದೆಯ ಚೂರಿ ಗಾಯವನ್ನು ಅನ್ವೇಷಿಸಿದಾಗ ಎಡಭಾಗದ ಸಬ್‌ಕ್ಲಾವಿಯನ್ ಅಪಧಮನಿ ಮತ್ತು ಸಬ್‌ಕ್ಲಾವಿಯನ್ ಅಭಿಧಮನಿಯಂತಹ ಪ್ರಮುಖ ರಕ್ತನಾಳಗಳು ಸಂಪೂರ್ಣವಾಗಿ ಸೀಳಿವೆ, ಎದೆಯ ಕುಹರವನ್ನು ತೆರೆದಾಗ ಸುಮಾರು 750 ಮಿಲಿಲೀಟರ್ ರಕ್ತ ಕಂಡುಬಂದಿದೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ5) ಅ.ಸಾ.5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತನಿಖಾಧಿಕಾರಿಯ ಕೋರಿಕೆಯ ಮೇರೆಗೆ, ಹೃದಯ, ಶ್ವಾಸಕೋಶದ ಭಾಗ, ಯಕೃತ್ತು, ಹೊಟ್ಟೆ ಮತ್ತು ಸಣ್ಣ ಕರುಳಿನಂತಹ ಆಂತರಿಕ

ಅಂಗಗಳನ್ನು, ಎಡ ಮೂತ್ರಪಿಂಡ, ರಕ್ತ, ಉಪ್ಪುನೀರನ್ನು ಪ್ರತ್ಯೇಕವಾಗಿ ಮುಚ್ಚಿ ಲೇಬಲ್ ಮಾಡಿ ತನಿಖಾಧಿಕಾರಿಯ ಮೂಲಕ ಬೆಳಗಾವಿ ಆರ್.ಎಫ್.ಎಸ್.ಎಲ್ ಗೆ ಕಳುಹಿಸಲಾಗಿದೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:6) ಅ.ಸಾ.5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸಾವಿಗೆ ಕಾರಣ – ಬೆಳಗಾವಿಯಿಂದ ಆರ್.ಎಫ್.ಎಸ್.ಎಲ್ ವರದಿಯು ಬಾಕಿ ಇರುವುದರಿಂದ, ಸಾವಿಗೆ ಕಾರಣವನ್ನು ಬಾಕಿ ಉಳಿಸಲಾಗಿ, ಮರಣದ ಅಂದಾಜು ಸಮಯವು ಮರಣೋತ್ತರ ಪರೀಕ್ಷೆಗೆ ಮುಂಚಿನ 22 ಗಂಟೆಗಳೊಳಗೆ ಇರುತ್ತದೆ, ತನಿಖಾಧಿಕಾರಿಯ ಕೋರಿಕೆಯ ಮೇರೆಗೆ ಅವರು ಮೃತ ವ್ಯಕ್ತಿಯ ರಕ್ತದ ಗುಂಪನ್ನು ಪರೀಕ್ಷಿಸಿದ್ದು, ಮೃತ ವ್ಯಕ್ತಿಯ ರಕ್ತದ ಗುಂಪು ಒ–ಪಾಸಿಟಿವ್ ಎಂದು ಕಂಡುಬಂದಿದೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:7) ಅ.ಸಾ.5 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರ್.ಎಫ್.ಎಸ್.ಎಲ್ ಬೆಳಗಾವಿಯಿಂದ ವರದಿ ಸ್ವೀಕರಿಸಿದ ನಂತರ ಮತ್ತು ಅವರ ಮುಂದೆ ಇರುವ ವಸ್ತು ಚಾಕು, ಈ ಮೇಲಿನ ಮೃತ ವ್ಯಕ್ತಿ ಮರಣವು ಮರಣೋತ್ತರ ಪರೀಕ್ಷೆಗೆ ಸುಮಾರು 22 ಗಂಟೆಗಳ ಮೊದಲು ರಕ್ತಸ್ರಾವದ ಆಘಾತದಿಂದಾಗಿ ಸಂಭವಿಸಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆ:8) ಅ.ಸಾ.6 ಡಾ. ನಿತೇಶ ದನಮಾಲ ಜೈನ್ ತಮ್ಮ ಸಾಕ್ಷ್ಯದಲ್ಲಿ, ದಿಃ 30.12.2024 ರಂದು ಸಿ.ಡಬ್ಲ್ಯು–9 ಮಧ್ಯಾಹ್ನ 2.30 ಕ್ಕೆ ದಾಳಿಯ ಹಿನ್ನೆಲೆ ಮೇರೆಗೆ ಬಂದಿದ್ದು, ಪರೀಕ್ಷೆಯಲ್ಲಿ ಈ ಕೆಳಗಿನವುಗಳನ್ನು ಕಂಡುಕೊಂಡಿದ್ದು, 1. ಎಡ ಭುಜದ ಮೇಲೆ ಮೃದುತೆ. 2. ಎಡ ಪ್ಯಾರೀಯಲ್ ಪ್ರದೇಶದ ಮೇಲೆ ಸೀಳು ಗಾಯವಿದ್ದು ಅದು ಕೆಂಪು ಬಣ್ಣದ್ದಾಗಿತ್ತು, ಎದೆಯ ಕ್ಷ–ಕಿರಣವನ್ನು ಮಾಡಲಾಗಿತ್ತು, ಎಡ ಕ್ಲವಿಕೆಯ ದೂರದ ಭಾಗದ ಮುರಿತವಾಗಿತ್ತು, ನಿಂತ ಹೊಟ್ಟೆಯ ಎಕ್ಸ್–ಕಿರಣ, ನ್ಯುಮೋಪೆರಿಟೊನಿಯಮ್–ನ ಯಾವುದೇ ಪುರಾವೆಗಳು ಕಂಡುಬಂದಿಲ್ಲ, ಮೆದುಳಿನ ಸಿಟಿ ಪರೀಕ್ಷೆಯನ್ನು ಮಾಡಲಾಗಿತ್ತು, ಅದು ಎಡಭಾಗದಲ್ಲಿ ಮುಂಭಾಗದ ಮತ್ತು ಕಪಾಲಭಾತ ಮೇಲ್ಮೈಯಲ್ಲಿ

ತಲೆಬುರುಡೆಯ ಹೆಮಟೊಮನ್ನು ತೋರಿಸುತ್ತದೆ, ರೋಗಿಯನ್ನು ಡಾಕ್ಟರ್. ಸೂರ್ಯಕಾಂತ್ ಕೆ. ಮೂಳೆಚಿಕಿತ್ಸೆ ಎ-ಘಟಕದಲ್ಲಿ ದಾಖಲಿಸಲಾಯಿತು ಮತ್ತು ಚಿಕಿತ್ಸೆ ನೀಡಲಾಯಿತು, ಪರೀಕ್ಷೆಯ ನಂತರ ಅವರು ಮೇಲಿನ ಗಾಯ ಸಂಖ್ಯೆ 1, ಗಂಭೀರವಾದದ್ದು ಎಂದು ಅಭಿಪ್ರಾಯಪಡುತ್ತೇನೆ, 2 ಸರಳ ಸ್ವರೂಪದದ್ದಾಗಿದೆ, ಈ ಗಾಯಗಳು ಗಟ್ಟಿಯಾದ ಮತ್ತು ಬಾಗಿದ ವಸ್ತುವಿನ ಸಂಪರ್ಕದಿಂದ ಉಂಟಾಗಿರಬಹುದು, ಗಾಯ ಸಂಖ್ಯೆ 2 ರ ಗಾಯದ ವಯಸ್ಸು 6 ಗಂಟೆಗಳಿಗಿಂತ ಕಡಿಮೆ ಇದೆ, ಈ ವಿಷಯದಲ್ಲಿ ಅವರು ಗಾಯದ ಪ್ರಮಾಣಪತ್ರವನ್ನು ನೀಡಿದ್ದೇನೆ, ನ್ಯಾಯಾಲಯದ ಮುಂದೆ ಇರುವ ಮರದ ಕೋಲಿನಿಂದ ಹೊಡೆದರೆ ಮೇಲಿನ ಗಾಯಗಳು ಉಂಟಾಗಬಹುದು, ಆ ಮರದ ಕೋಲನ್ನು ಅವರಿಂದ ಪರೀಕ್ಷೆಗೊಳಪಡಿಸಲಾಯಿತು ಮತ್ತು ಆ ಮರದ ಕೋಲಿನ ಕುರಿತು ಅವರು ಅಭಿಪ್ರಾಯವನ್ನು ನೀಡಿದ್ದೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ9) ಅ.ಸಾ.7 ಬಸವರಾಜ ಎದ್ದಲಗುಡ್ಡ ತಮ್ಮ ಸಾಕ್ಷ್ಯದಲ್ಲಿ, ದಿಃ 30/12/2024 ರಂದು ರಾತ್ರಿ 8.30 ನಿಮಿಷಕ್ಕೆ ಚಾಸಾ-1 ರವರು ಠಾಣೆಗೆ ಹಾಜರಾಗಿದ್ದು, ನಿಪಿ-1 ರಂತೆ ದೂರು ಕೊಟ್ಟಿದ್ದು, ಅದನ್ನು ದಾಖಲಿಸಿಕೊಂಡಿರುತ್ತೇನೆ, ದೂರು ದಾಖಲಿಸಿದ ನಂತರ ಪ್ರ.ವ.ವರದಿಯನ್ನು ಸಿಪಿಸಿ-472 ರವರೊಂದಿಗೆ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ, ಅದೇ ದಿನ ರಾತ್ರಿ 11-50 ರಿಂದ 12-20 ರವರೆಗೆ ನಿಪಿ-7 ರಂತೆ ಪಿರ್ಯಾದಿಯ ಬಟ್ಟೆ ಮು.ಮಾ-1ನ್ನು ಜಪ್ತುಪಡಿಸಿಕೊಂಡು ನಿಪಿ-6 ರಂತೆ ಫೋಟೋ ತೆಗೆಯಿಸಿರುತ್ತೇನೆ, ನಂತರ ನ್ಯಾಯಾಲಯಕ್ಕೆ ಪಿಎಫ್ ಅನ್ನು ಕಳುಹಿಸಿಕೊಟ್ಟಿರುತ್ತೇನೆ, ಮುಂದಿನ ತನಿಖೆಯನ್ನು ಚಾಸಾ-37 ರವರಿಗೆ ವಹಿಸಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ10) ಅ.ಸಾ.8 ಶ್ರೀಶೈಲ ಶಿವಪ್ಪ ಕೌಜಲಗಿ ತಮ್ಮ ಸಾಕ್ಷ್ಯದಲ್ಲಿ, ದಿಃ 31/12/2024 ರಂದು ಈ ಪ್ರಕರಣದ ತನಿಖೆಯನ್ನು ಚಾಸಾ.36 ರವರಿಂದ ಪಡೆದು ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನಾ ಸ್ಥಳದಲ್ಲಿ ವಸ್ತುಗಳು ನಾಶವಾಗದಂತೆ ಚಾಸಾ.27 ಹಾಗೂ 28 ರವರನ್ನು ನೇಮಿಸಿ, ಈ ಪ್ರಕರಣದಲ್ಲಿ ಮೃತರ ಶವವನ್ನು ಕಲಘಟಗಿಯ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಇದ್ದುದರಿಂದ ಚಾಸಾ.32 ರವರನ್ನು ಬೆಂಗಾವಲಿಗಾಗಿ ನೇಮಿಸಿದೆನು ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ11) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಬೆಳಿಗ್ಗೆ 11.00 ಗಂಟೆಗೆ ಚಾಸಾ.1 ರವರೊಂದಿಗೆ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತಳ ಶವ ಪಂಚನಾಮೆಯನ್ನು ಚಾಸಾ.2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೆನೆ, ಆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೆನೆ, ಮೃತಳ ಶವದ ಪಿಎಂ ಮಾಡಿಸುವ ಕುರಿತು ಕೋರಿಕೆ ಕೊಟ್ಟಿರುತ್ತೆನೆ, ಚಾಸಾ.33 ರವರಿಂದ ಕಲಂ 63(4)(ಸಿ) ಬಿಎನ್.ಎಸ್.ಎಸ್. ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ12) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 31/12/2024 ರಂದು ಚಾಸಾ.1 ರವರ ಪುನಃ ಹೇಳಿಕೆಯನ್ನು ನಿಶಾನೆ.ಪಿ.8 ರಂತೆ ಪಡೆದುಕೊಂಡಿರುತ್ತೆನೆ, ಅದೇ ದಿನ ಚಾಸಾ.1 ರವರು ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ ಚಾಸಾ.2 ಮತ್ತು 4 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿ ಘಟನಾ ಸ್ಥಳದಲ್ಲಿಯ ವಸ್ತುಗಳಾದ ಸುಮಾರು 4 ಫೂಟ್ 3 ಇಂಚು ಉದ್ದ ಹಾಗೂ ಅಲ್ಲಲ್ಲಿ ರಕ್ತ ಹತ್ತಿದ ಕಾಡು ಕಟ್ಟಿಗೆ ಬಡಿಗೆ, ಸುಮಾರು 14 ಇಂಚು ಉದ್ದ ಕಟ್ಟಿಗೆ ಹಿಡಿಕೆಯುಳ್ಳ ಒಂದು ಬಡಿಗೆ ಹರಿತವಾಗಿರುವ ಮುಂದೆ ಚೂಪು ಇರುವ ಅಲ್ಲಲ್ಲಿ ರಕ್ತ ಹತ್ತಿದ ಚಾಕು, ರಕ್ತ ಹತ್ತಿದ ಮಣ್ಣು, ರಕ್ತ ಹತ್ತದೇ ಇರುವ ಮಣ್ಣು, ಇವುಗಳನ್ನು ಸುಕೋ ಅಧಿಕಾರಿ ಚಾಸಾ.22 ರವರಿಂದ ಪ್ಯಾಕ್ ಮಾಡಿ ಸೀಲ್ ಮಾಡಿಸಿರುತ್ತೆನೆ, ಸ್ಥಳದಲ್ಲಿ ನಿಶಾನೆ.ಪಿ.5 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೆನೆ, 3 ಫೋಟೋಗಳನ್ನು ತೆಗೆಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ13) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪ್ರಕರಣದಲ್ಲಿ ಸಾಕ್ಷಿದಾರರಾದ ಚಾಸಾ.2, 8, 10 ರಿಂದ 15 ರವರ ಹೇಳಿಕೆಗಳನ್ನು ಪಡೆದಿರುತ್ತೆನೆ, ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ನ್ಯಾಯಾಲಯಕ್ಕೆ ಪಿ.ಎಫ್ ನಂ.188/2024 ದಾಖಲಿಸಿರುತ್ತೆನೆ, ಅದೇ ದಿನ ಚಾಸಾ.32 ರವರು ತಮ್ಮ ವರದಿಯೊಂದಿಗೆ ಪಿಎಂ ಪರೀಕ್ಷೆ ನಂತರ ಠಾಣೆಗೆ ಬಂದು ಮೃತಳ ದೇಹವನ್ನು ವಾರಸುದಾರರಿಗೆ ನೀಡಿದ ಕುರಿತು ಪಡೆದ ಪಾವತಿ ರಸೀದಿ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೆನೆ, ಅದೇ ದಿನ ಚಾಸಾ.32 ಮತ್ತು 35 ರವರ ಹೇಳಿಕೆಯನ್ನು ಪಡೆದಿರುತ್ತೆನೆ, ಅದೇ ದಿನ ಚಾಸಾ.29 ರವರಿಗೆ ಗಾಯಾಳು ಹಾಗೂ ಆರೋಪಿಯ ರಕ್ತ ಹತ್ತಿದ ಬಟ್ಟೆಯನ್ನು ಪ್ಯಾಕ ಮಾಡಿ ಪೂರೈಸುವಂತೆ ಮನವಿ ಪತ್ರ

ಕೊಟ್ಟು ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೆನೆ, ಅದೇ ದಿನ ಚಾಸಾ.23 ರಿಂದ 26 ರವರಿಗೆ ಹುಬ್ಬಳ್ಳಿ ಯ ಕಿಮ್ಸ ಆಸ್ಪತ್ರೆಯಲ್ಲಿ 1 ಮತ್ತು 2 ಆರೋಪಿತರಾದ ನಿಮ್ಮ ಬೆಂಗಾವಲಿಗಾಗಿ ನೇಮಿಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ14) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 02/01/2025 ರಂದು ಆರೋಪಿ 2 ರವರಾದ ನೀವು ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದರಿಂದ ಚಾಸಾ.25 ಮತ್ತು 26 ರವರು ಆರೋಪಿತ 2 ರವರಾದ ನಿಮ್ಮನ್ನು ಅವರ ಮುಂದೆ ಹಾಜರುಪಡಿಸಿದ್ದರಿಂದ ನಿಮಗೆ ವಿಚಾರಣೆ ಮಾಡಿ, ಸ್ವ ಖುಷಿ ಹೇಳಿಕೆಯನ್ನು ಪಡೆದುಕೊಂಡು ಅದರಲ್ಲಿ ಅಪರಾಧ ಮಾಡಿದ ಬಗ್ಗೆ ಆರೋಪಿಯಾದ ನೀವು ಒಪ್ಪಿಕೊಂಡಿದ್ದರಿಂದ ನಿಮ್ಮನ್ನು ದಸ್ತಗಿರಿ ಮಾಡಿ ನಿಯಮಗಳನ್ನು ಪಾಲಿಸಿ ಯೋಗ್ಯ ಬೆಂಗಾವಲಿನಲ್ಲಿ ಠಾಣೆಯಲ್ಲಿ ಇರಿಸಿದೆನು, ಅದೇ ದಿನ ಚಾಸಾ.25 ಮತ್ತು 26 ರವರ ಹೇಳಿಕೆಯನ್ನು ಪಡೆದಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ15) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 03/01/2025 ರಂದು ಕೌಂಟರ್ ಕೇಸ್ ಪ್ರಕರಣ 317/2024 ದಾಖಲು ಆಗಿದ್ದರಿಂದ ಘಟನಾ ಸ್ಥಳದಲ್ಲಿ ಸಿಬ್ಬಂದಿಗಳಾದ ಚಾಸಾ.27 ಮತ್ತು 28 ರವರನ್ನು ನೇಮಿಸಿದ್ದು, ಚಾಸಾ.27 ಮತ್ತು 28 ರವರು ತಮ್ಮ ವರದಿಗಳನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ16) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಆರೋಪಿ 2 ರವರಾದ ನಿಮ್ಮನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ17) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 06/01/2025 ರಂದು ಕಿಮ್ಸ ಆಸ್ಪತ್ರೆಯಲ್ಲಿ ಉಪಚಾರದಲ್ಲಿದ್ದ ಗಾಯಾಳು ಸಚಿನ್ ಹಾಗೂ ಆರೋಪಿತರಾದ ನಿಮ್ಮ

ಬಸವರಾಜ ಹಾಗೂ ಮೈಲಾರಿ ರಕ್ತ ಹತ್ತಿದ ಬಟ್ಟೆಗಳನ್ನು ಚಾಸಾ.29 ರವರು ಹಾಜರುಪಡಿಸಿದರು, ಅವುಗಳನ್ನು ಚಾಸಾ.5 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತೇನೆ, ಫೋಟೋ ತೆಗೆಸಿರುತ್ತೇನೆ, ಅದೇ ದಿನ ಮುದ್ದೆಮಾಲುಗಳನ್ನು ನ್ಯಾಯಾಲಯಕ್ಕೆ ಜಮಾ ಮಾಡಿಸಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ18) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 06/01/2025 ರಂದು ಚಾಸಾ.30 ರವರು ಚಾಸಾ.16 ರವರ ಕೊಟ್ಟ ಪಿಎಂ ವರದಿಯನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿರುತ್ತೇನೆ, ಅದೇ ದಿನ ವೈದ್ಯಾಧಿಕಾರಿಗಳು ಮೃತಳ ಪಿಎಂ ಕಾಲಕ್ಕೆ ಸಂಗ್ರಹಿಸಿದ ವಿಸ್ರಾ ಗಳನ್ನು ಚಾಸಾ.30 ರವರು ಹಾಜರುಪಡಿಸಿದ್ದು, ಅವುಗಳನ್ನು ಚಾಸಾ.5 ಮತ್ತು 7 ರವರ ಸಮಕ್ಷಮ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತೇನೆ, ಫೋಟೋ ತೆಗೆಸಿರುತ್ತೇನೆ, ಅದೇ ದಿನ ಚಾಸಾ.29 ರಿಂದ 34 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ19) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 07/01/2025 ರಂದು ಸದರಿ ಪ್ರಕರಣದ ಫಿರ್ಯಾದಿ ಚಾಸಾ.1 ಹಾಗೂ ಚಾಸಾ.9, ಆರೋಪಿ 1 ಮತ್ತು 2 ರವರ ಸಿಡಿಆರ್. ಗಳನ್ನು ಪಡೆದುಕೊಳ್ಳಲು ಕೋರಿಕೆ ಪತ್ರವನ್ನು ಎಸ್.ಪಿ. ರವರಿಗೆ ಕಳುಹಿಸಿಕೊಟ್ಟಿರುತ್ತೇನೆ, ದಿಃ 08/01/2025 ರಂದು ಸಿಡಿಆರ್. ವಿವರಗಳು ಬಂದಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಅದೇ ದಿನ ಚಾಸಾ.20 ತಹಶೀಲ್ದಾರ ರವರಿಗೆ ಘಟನಾ ಸ್ಥಳದ ಆಸ್ತಿಯ ಉತಾರ ಕೊಡಲು ಮನವಿಯನ್ನು ಕಳುಹಿಸಿಕೊಟ್ಟಿರುತ್ತೇನೆ, ಅದೇ ದಿನ ಘಟನಾ ಸ್ಥಳದ ನಕಾಶೆ ಪೂರೈಸಲು ಚಾಸಾ.27 ರವರಿಗೆ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ20) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 09/01/2025 ರಂದು ಸದರಿ ಪ್ರಕರಣದಲ್ಲಿ ಜಪ್ತಾದ 22 ಆರ್ಟಿಕಲ್ ಗಳನ್ನು ಆರ್.ಎಫ್.ಎಸ್.ಎಲ್. ಬೆಳಗಾವಿಗೆ ಚಾಸಾ.31 ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ, ಸದರಿ ಚಾಸಾ.31 ರವರು

ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿರುತ್ತೇನೆ, ಚಾಸಾ.31 ರವರ ಹೇಳಿಕೆಯನ್ನು ಪಡೆದಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ21) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 11/01/2025 ರಂದು ಚಾಸಾ.23 ಮತ್ತು 24 ರವರು ವರದಿಯನ್ನು ಕೊಟ್ಟಿದ್ದು ಸ್ವೀಕರಿಸಿರುತ್ತೇನೆ, ಅದೇ ದಿನ ಚಾಸಾ.9 ರವರ ಹೇಳಿಕೆಯನ್ನು ನಿಶಾನೆ.ಪಿ.9 ರಂತೆ ಪಡೆದಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ22) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 14/01/2025 ರಂದು ಸದರಿ ಪ್ರಕರಣದಲ್ಲಿ ಗಾಯಾಳು ಸಚಿನ್ ರವರ ಗಾಯದ ಪ್ರಮಾಣ ಪತ್ರವನ್ನು ಪಡೆಯಲು ಚಾಸಾ.19 ರವರಿಗೆ ಕೋರಿಕೆ ಪತ್ರ ಕಳುಹಿಸಿಕೊಟ್ಟಿರುತ್ತೇನೆ, ದಿಃ 15/01/2025 ರಂದು ಅದರ ಸ್ವೀಕೃತಿಯನ್ನು ಪಡೆದಿರುತ್ತೇನೆ, ದಿಃ 29/01/2025 ರಂದು ಈ ಪ್ರಕರಣದಲ್ಲಿ ಗಾಯಾಳು ಚಾಸಾ.9 ಸಚಿನ್ ರವರ ಗಾಯದ ಪ್ರಮಾಣ ಪತ್ರವನ್ನು ಪೂರೈಸುವಂತೆ ಚಾಸಾ.19 ರವರಿಗೆ ಇನ್ನೊಂದು ಕೋರಿಕೆ ಪತ್ರ ಕಳುಹಿಸಿಕೊಟ್ಟಿರುತ್ತೇನೆ, ದಿಃ 01/02/2025 ರಂದು ರಂದು ಅದರ ಸ್ವೀಕೃತಿಯನ್ನು ಪಡೆದಿರುತ್ತೇನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ23) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 04/02/2025 ರಂದು ಸದರಿ ಪ್ರಕರಣದಲ್ಲಿ ಆರ್.ಎಫ್.ಎಸ್.ಎಲ್. ಬೆಳಗಾವಿ ರವರಿಂದ ವರದಿಗಳು ಬಂದಿದ್ದು, ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 08/02/2025 ರಂದು ಚಾಸಾ.14 ರವರ ಹೇಳಿಕೆಯನ್ನು ಪಡೆದಿರುತ್ತೇನೆ, ದಿಃ 10/02/2025 ರಂದು ಚಾಸಾ.21 ರವರು ಘಟನಾ ಸ್ಥಳದ ನಕಾಶೆಯನ್ನು ಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 02/03/2025 ರಂದು ಚಾಸಾ.9 ರವರ ಗಾಯದ ಪ್ರಮಾಣ ಪತ್ರ ಹಾಗೂ ಕೇಸ್ ಶೀಟ್ ನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ದಿಃ 04/03/2025 ರಂದು ಚಾಸಾ.20 ರವರು ಉತಾರ ವನ್ನು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ, ಅದೇ ದಿನ ಸದರಿ ಪ್ರಕರಣದಲ್ಲಿ ಗಾಯದ ಬಗ್ಗೆ ಅಂತಿಮ ಅಭಿಪ್ರಾಯ ಹಾಗೂ ಸಿಡಿಆರ್. ಗಳ 65–ಬಿ

ಪ್ರಮಾಣ ಪತ್ರ ಪಡೆಯುವುದನ್ನು ಬಾಕಿ ಇಟ್ಟು ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ24) ಅ.ಸಾ.8 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿಃ 02/09/2025 ರಂದು ಏರ್ಟೆಲ್ ಹಾಗೂ ಜಿಯೋ ಕಂಪನಿ ರವರು ಕಲಂ 63(4)(ಸಿ) ಪ್ರಮಾಣ ಪತ್ರ ನೀಡಿರುವುದನ್ನು ಸ್ವೀಕರಿಸಿರುತ್ತೆನೆ, ದಿಃ 24/06/2025 ರಂದು ಚಾಸಾ.19 ರವರು ಚಾಕು ಮತ್ತು ಕಟ್ಟಿಗೆ ಅಂತಿಮ ಅಭಿಪ್ರಾಯವನ್ನು ಕೊಟ್ಟಿದ್ದು, ಸ್ವೀಕರಿಸಿರುತ್ತೆನೆ, ದಿಃ 06/10/2025 ರಂದು ನಿಶಾನೆ.ಪಿ.14, 16, 36 ಮತ್ತು 37 ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ ಎಂದು ಹೇಳಿದ್ದು, ಇದಕ್ಕೆ ನಿಮ್ಮ ಉತ್ತರವೇನು?

ಉತ್ತರಃ

ಪ್ರಶ್ನೆಃ25) ನಿಮ್ಮ ಮೇಲಿನ ಈ ಪ್ರಕರಣದ ಬಗ್ಗೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಶ್ನೆಃ26) ನೀವು ಅಭಿರಕ್ಷೆ ಪರ ಸಾಕ್ಷಿಗಳನ್ನು ವಿಚಾರಣೆ ಮಾಡುವುದಿದೆಯಾ?

ಉತ್ತರಃ

(ಆರೋಪಿಗೆ ಮೇಲಿನ ಪ್ರಶ್ನೆಗಳನ್ನು ಓದಿ ಹೇಳಿ ವಿವರಿಸಿದ್ದು, ಆತನು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾನೆ ಎಂಬುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕಃ 04/08/2026

**(ಶ್ರೀಮತಿ ಜರೀನಾ)**
**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಧಾರವಾಡ.**